# ಆಹಾ ಸುದ್ದಿ!

★ ಸಸಿತೋಟ



ಪಿಕ್ಚರ್ ಪರ್ಫೆಕ್ಟ್ ಅಂದರೆ ಇದು. ಫೋಟೊಗ್ರಾಫರ್ 'ರೆಡಿ?' ಅಂದಾಕ್ಷಣ ಕ್ರೊಯೇಶಿಯಾದ ಬಲಪಂಥೀಯ ನಾಯಕ ಇವಾನ್ ಮುಖದಲ್ಲಿ ಚಿಮ್ಮಿಸಿದ ನಗು ಆತ ಧರಿಸಿದ್ದ ಪ್ಯಾಂಟಿಗೆ ಸರಿಬರಲಿಲ್ಲ ಅಂತ ಕಾಣುತ್ತದೆ, ಎಡವಟ್ಟು ಮಾಡೇ ಬಿಟ್ಟಿತು. ಅದೂ ಕ್ರೊಯೇಶಿಯ ಅಧ್ಯಕ್ಷೆ ಕೊಲಿಂದಾ ಜೊತೆ ಗ್ರೂಪ್ ಫೋಟೋಗೆ ಪೋಸ್ ಕೊಡುವ ಸಂಭ್ರಮದಲ್ಲಿದ್ದಾಗ ಪ್ಯಾಂಟ್ ಯಾಕೆ 'ಸ್ಟ್ರಿಪ್‌ಟೀಸ್'ಗೆ ಕೈ ಹಾಕಿತೋ! ವೃದ್ಧ ಇವಾನ್ ಜಾಗದಲ್ಲಿ ಯುವತಿಯಿದ್ದಿದ್ದರೆ ಎಂದು ಕ್ಯಾಮೆರಾ ಕಣ್ಣು ಹಳಹಳಿಸಿರಬಹುದು.




ಇಸ್ರೇಲಿನ ಈ ಜೋಡಿ ಯುದ್ಧಕ್ಕೆ ನಿಂತವರಂತೆ ಕೈಲಿ ಹಿಡಿದಿದ್ದು ಮಾತ್ರ ಮಷಿನ್ ಗನ್ ಅಲ್ಲ, ಪರಸ್ಪರರ ಮದುವೆ ಉಡುಗೆಯನ್ನು ಹಾಳು ಮಾಡಿಕೊಳ್ಳಲು ಹಿಡಿದ ಬಣ್ಣ ತುಂಬಿದ ಗನ್. ಕ್ರಿಸ್ಮಸ್ ದಿನ ಅಲ್ಲಿಯ ಡಜನ್ ಜೋಡಿ ತಮ್ಮ ಮದುವೆಯ ಸುಂದರ ದಿರಿಸನ್ನು ಧರಿಸಿ ಹಂತ ಹಂತವಾಗಿ ಹಾಳು ಮಾಡಿಕೊಂಡು ವಿಡಿಯೋ ತೆಗೆದುಕೊಂಡರಂತೆ. ಕ್ರಿಸ್ಮಸ್ ಸಂಭ್ರಮದಲ್ಲಿ ಆ 24 ಮಂದಿಗೆ ತಮ್ಮ ಮದುವೆಯೆಂಬ ಕರಾಳ ದಿನ ಯಾಕೆ ನೆನಪಾಯ್ತೋ!

ಹಕ್ಕಿಗಳಿಗೆ ವಯಸ್ಸಾದರೂ ಅವುಗಳ ಪುಕ್ಕಗಳು ಬಿಳಿಯಾಗದೇ ರಂಗುರಂಗಾಗಿ ಸೆಳೆಯುವುದೇಕೆ ಎಂಬ ಪ್ರಶ್ನೆಗೆ ಇಂಗ್ಲೆಂಡ್‌ನ ವಿವಿಯೊಂದು ಉತ್ತರ ಕಂಡುಕೊಂಡಿದೆಯಂತೆ. ಕೃತಕ ಬಟ್ಟೆಗೆ ಅದನ್ನು ಬಳಸಿ, ತೊಳೆದರೂ ಬಣ್ಣ ಹೋಗದ ಹಾಗೇ ಮಾಡಲು ಪ್ರಯೋಗಗಳು ನಡೆದಿವೆಯಂತೆ. ಅದೇ ಫಾರ್ಮುಲಾವನ್ನು ಮನುಷ್ಯನ ಮೇಲೆ ಪ್ರಯೋಗಿಸಿ ತಲೆ ಕೂದಲು, ಮೀಸೆ-ಗಡ್ಡವನ್ನು ಕಪ್ಪುಕಪ್ಪಾಗಿಟ್ಟು ಚಿರಯೌವನಿಗನನ್ನಾಗಿ ಮಾಡಬಹುದಲ್ಲ ಎಂಬ ಕನಸಿಗೆ ಸದ್ಯಕ್ಕಂತೂ ಒಂದು ಪುಟ್ಟ ಬ್ರೇಕ್ ಬಿದ್ದಿದೆ.

ಅಮೆರಿಕಾದ ಮಹಿಳೆಯೊಬ್ಬಳು ಗಂಡನೊಡನೆ ಬಿಯರ್‌ಗಾಗಿ ನಡೆದ ಕಾದಾಟದಲ್ಲಿ ಆತನ ಕಿವಿಯನ್ನೇ ಕಚ್ಚಿ ತುಂಡರಿಸಿದ್ದಾಳಂತೆ. ಗದ್ದಲ ಕೇಳಿ ಆಗಮಿಸಿದ ಪೊಲೀಸರು ಕಿವಿಯ ತುಂಡಿಗಾಗಿ ಹುಡುಕಾಟ ನಡೆಸಿದರೆ, ಧೀರ ಮಹಿಳೆ ಜೆಮಿ ಮಾತ್ರ ಬಾಟಲ್‌ಗಾಗಿ ಹುಡುಕುತ್ತಿದ್ದಳಂತೆ. ಪೊಲೀಸರ ದೃಷ್ಟಿಯಲ್ಲಿ ಈ 'ಬಿಯರ್- ಇಯರ್' ಯುದ್ಧ 2015ರ ಮಹಾಯುದ್ಧವಂತೆ.




ಇಂಡೋನೇಷಿಯಾದ ತೋಟವೊಂದರಲ್ಲಿ ಎರಡು ಮರಗಪ್ಪೆಗಳು ವೆಸ್ಪಾ ಆಟಿಕೆ ಸ್ಕೂಟರ್ ಅನ್ನು ಏರಿ ಸ್ಟೈಲಾಗಿ ಕುಳಿತಿವೆ. ಗೆಳತಿಯೊಂದಿಗೆ ಇಟಲಿ ಕಂಪೆನಿಯ ಈ ಸ್ಕೂಟರ್‌ನಲ್ಲಿ (ಈಗ ಸುಧಾರಿತ ರೂಪದಲ್ಲಿ ಮತ್ತೆ ರಸ್ತೆಗಿಳಿದಿದೆ) ಸುತ್ತಿದ್ದನ್ನು ನೆನಪಿಸಿಕೊಂಡು ಹಣ್ಣಾದ ಮೀಸೆಗಳು ನಕ್ಕರೆ, ಹೆಂಡತಿಯನ್ನು ಕೂಡ್ರಿಸಿಕೊಂಡು ಮಾವನ ಮನೆಗೆ ಪಯಣ ಬೆಳೆಸಿದ್ದವರು ನೆರಿಗೆ ಮುಖಕ್ಕೆ ಇನ್ನಷ್ಟು ಗೆರೆ ಸೇರಿಸಿರಬಹುದು.



ವಿಯೆಟ್ನಾಮಿನಲ್ಲಿ ಮಾದಕ ದ್ರವ್ಯ ವ್ಯಸನಿಗಳು ರಚಿಸಿದ ನೈಸರ್ಗಿಕ ಕಲಾಕೃತಿ. ಬಳಸಿ ಬಿಸಾಡಲು ಮನಸ್ಸು ಬರದೆ ಸಿರಿಂಜ್‌ಗಳನ್ನು ಹಾಗೇ ಬಾಳೆ ಮರಕ್ಕೆ ಚುಚ್ಚುತ್ತಾರಂತೆ. ಮತ್ತೆ ಮಾದಕ ದ್ರವ್ಯವನ್ನು ದೇಹಕ್ಕೆ ಸೇರಿಸಲು ಈ ಸಿರಿಂಜ್‌ಗಳು ಕಾಯಬೇಕು. ಸೂಜಿ ತುದಿಗೆ ಅಂಟಿದ ದ್ರವ್ಯ ಹೀರಿ ಹೀರಿ ಬಾಳೆ ಮರ ಮತ್ತೇರಿ ಓಲಾಡದಿದ್ದರೆ ಸಾಕು.